ಕ್ರ. ಸಂ: ೮೫

ಕರ್ನಾಟಕ ಸರ್ಕಾರ

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**

ದೂರವಾಣಿ ಸಂಖ್ಯೆ: 080-26644312/14/15, ಫ್ಯಾಕ್ಸ್ ನಂ.22453646 ಇ-ಮೇಲ್:karbuildworkerswelfare@gmail.com.

ಸಂಖ್ಯೆ: ಕಕಾಮಂ/ಇಎಸ್‌ಟಿ/ಸಿಆರ್-01/2016-17

ಕಾರ್ಯದರ್ಶಿಯವರ ಕಛೇರಿ,
ಕಲ್ಯಾಣ ಸುರಕ್ಷಾ ಭವನ,
ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-560029,
ದಿನಾಂಕ: 02-03-2017.

## ಸುತ್ತೋಲೆ

**ವಿಷಯ:** ಮಂಡಳಿಯಲ್ಲಿ ಫಲಾನುಭವಿಯ ನಿಂತು ಹೋದ ಸದಸ್ಯತ್ವನ್ನು ಮರಳಿ ಪಡೆಯುವಾಗ ಅನುಸರಿಸಬೇಕಾದ ವಿಧಾನದ ಬಗ್ಗೆ.

**ಉಲ್ಲೇಖ:** ಫಲಾನುಭವಿಯ ನಿಂತು ಹೋದ ಮಂಡಳಿಯ ಸದಸ್ಯತ್ವನ್ನು ಮರಳಿ ಪಡೆಯುವ ಅಧಿಕಾರ ವಿಕೇಂಧ್ರಿಕರಣ ಮಾಡಿ ಹೊರಡಿಸಿರುವ ಕಛೇರಿ ಆದೇಶದ ಪತ್ರ ಸಂಖ್ಯೆ: ಕಕಾಮಂ/ಆಡಳಿತ/ಸಿಆರ್-01/2011-12, ದಿನಾಂಕ: 19-04-2011.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಾವಳಿಗಳು 2006ರ ನಿಯಮ 21(ಎ)(2) ರನ್ವಯ ಫಲಾನುಭವಿಯು ಸತತವಾಗಿ ಒಂದು ವರ್ಷ ವಂತಿಗೆಯನ್ನು ಪಾವತಿ ಮಾಡದಿದ್ದಲ್ಲಿ ಫಲಾನುಭವಿಯ ಸದಸ್ಯತ್ವ ನಿಂತು ಹೋಗುತ್ತದೆ. ಸದರಿ ನಿಯಮಗಳ ಪ್ರಾವಧಾನಗಳನ್ವಯ ಇಂತಹ ಪ್ರಕರಣಗಳಲ್ಲಿ ಮಂಡಳಿಯ ಕಾರ್ಯದರ್ಶಿ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಯ ಅನುಮತಿಯನ್ನು ಪಡೆದು ಬಾಕಿ ಉಳಿದ ವಂತಿಗೆ ಹಣ ಮತ್ತು ಈ ಅವಧಿಯಲ್ಲಿ ಪ್ರತಿ ತಿಂಗಳಿಗೆ ರೂ.2/- ರಂತೆ ದಂಡ ಪಾವತಿ ಮಾಡಿದ ನಂತರ ನಿಂತು ಹೋದ ಸದಸ್ಯತ್ವ ಮರಳಿ ಪಡೆಯಲು ಫಲಾನುಭವಿಗೆ ಗರಿಷ್ಠ ಎರಡು ಬಾರಿ ಮಾತ್ರ ಅನುಮತಿ ನೀಡಲು ಅವಕಾಶವಿರುತ್ತದೆ. ಇದರೊಂದಿಗೆ ಈ ಪ್ರಕರಣಗಳಲ್ಲಿ ಅನುಮತಿ ನೀಡುವ ಮುಂಚೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಕಲಂ 14ರ ಪ್ರಾವದಾನಗಳನ್ನು ಸಹ ಪಾಲಿಸಬೇಕಾಗಿರುತ್ತದೆ.

ಫಲಾನುಭವಿಯ ನಿಂತು ಹೋದ ಸದಸ್ಯತ್ವ ಮರಳಿ ಪಡೆಯುವ ಸಲುವಾಗಿ ಅನುಮತಿ ನೀಡುವ ಅಧಿಕಾರವನ್ನು ಈಗಾಗಲೇ ಈ ಕಛೇರಿಯ ಉಲ್ಲೇಖಿತ ಪತ್ರದ ಮುಖೇನ ಫಲಾನುಭವಿ ನೋಂದಣಿ ಅಧಿಕಾರಿಯಾಗಿರುವ ಕಾರ್ಮಿಕ ಅಧಿಕಾರಿ, ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಕಾರ್ಮಿಕ ನಿರೀಕ್ಷಕರುಗಳಿಗೆ ವಿಕೇಂದ್ರಿಕರಣ ಮಾಡಲಾಗಿರುತ್ತದೆ.

ಈ ರೀತಿಯಾಗಿ ಫಲಾನುಭವಿಯ ನಿಂತು ಹೋದ ಸಂದರ್ಭದಲ್ಲಿನ ಸದಸ್ಯತ್ವವನ್ನು ಪುನಶ್ಚೇತನಗೊಳಿಸಲು ಪ್ರಸ್ತಾವನೆಗಳು ಬಂದಾಗ ಈ ಕೆಳಕಂಡ ಸೂಚನೆಗಳನ್ನು ನೋಂದಣಾಧಿಕಾರಿಗಳು ಪಾಲಿಸತಕ್ಕದ್ದು:-

1. ಫಲಾನುಭವಿ ಸದಸ್ಯತ್ವವನ್ನು ಪುನಶ್ಚೇತನಗೊಳಿಸಲು ಅವರೇ ಸಹಿ ಮಾಡಿದ ಅರ್ಜಿಯನ್ನು ಸಂಬಂಧಿಸಿದ ನೋಂದಣಾಧಿಕಾರಿಗಳು ಸ್ವೀಕರಿಸಿ, ಆ ಸಹಿ ಅವರದೇ ಎಂಬುದರ ಬಗ್ಗೆ ಖಾತರಿ ಪಡಿಸಿಕೊಳ್ಳಬೇಕು.

45

2. ಫಲಾನುಭವಿ ನಿಗಧಿತ ಸಮಯದಲ್ಲಿ ವಂತಿಗೆಯನ್ನು ಪಾವತಿಸದೇ ಇರುವುದಕ್ಕೆ ಸ್ಪಷ್ಟ ಕಾರಣಗಳನ್ನು ಅರ್ಜಿಯಲ್ಲಿ ನಮೂದಿಸಿರಬೇಕು.
3. ಫಲಾನುಭವಿಯು ವಂತಿಗೆ ಹಣವನ್ನು ಪಾವತಿಸದೇ ಇರುವ ಕಾರಣಗಳಿಗೆ ಪೂರಕ ದಾಖಲೆಗಳನ್ನು ಒದಗಿಸಬೇಕು.
4. ಸದಸ್ಯತ್ವ ರದ್ದುಗೊಂಡ ಅವಧಿಯಲ್ಲಿನ **ಪ್ರತಿ ವರ್ಷಕ್ಕೆ ಪ್ರತ್ಯೇಕವಾಗಿ** ಫಲಾನುಭವಿಯು ನಿರ್ವಹಿಸಿದ ನಿರ್ಮಾಣ ಕೆಲಸದ ಅವಧಿಯ ಬಗ್ಗೆ ನಿಯಮ 20(2)c ರಲ್ಲಿ ಸೂಚಿಸಿರುವವರಿಂದ ನಿಗದಿತ ನಮೂನೆ-5(A) ರಲ್ಲಿ ಉದ್ಯೋಗ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿರಬೇಕು.
5. ಫಲಾನುಭವಿಯ ಸದಸ್ಯತ್ವ ಪುನಶ್ಚೇತನಕ್ಕಾಗಿ ಸಲ್ಲಿಸಿರುವ ಅರ್ಜಿಗೆ ಅನುಮೋದನೆ ನೀಡುವ ಮೊದಲು ಸಂಬಂಧಿತ ನೋಂದಣಾಧಿಕಾರಿಯು ಫಲಾನುಭವಿ ನೀಡಿರುವ ಮಾಹಿತಿಯು ಸತ್ಯವಿದೆಯೇ ಹಾಗೂ ಸ್ವೀಕರಿಸಬಹುದೇ ಎಂಬುದರ ಬಗ್ಗೆ ಅವಶ್ಯಕತೆ ಕಂಡುಬಂದಲ್ಲಿ ಕ್ಷೇತ್ರ ಪರಿಶೀಲನೆ ಕೈಗೊಂಡು ಖಚಿತಪಡಿಸಿಕೊಂಡ ತಪಾಸಣಾ ವರದಿಯನ್ನು ಕಡತದಲ್ಲಿ ಲಗತ್ತಿಸಬೇಕು.

ಒಂದು ವೇಳೆ ಫಲಾನುಭವಿಯು ಈ ಅವಧಿಯ ಯಾವುದೇ ವರ್ಷದಲ್ಲಿ ನಿರ್ಮಾಣ ಕೆಲಸಗಳಲ್ಲಿ ನಿಗಧಿತ 90 ದಿನಗಳಿಗಿಂತ ಕಡಿಮೆ ಕೆಲಸ ನಿರ್ವಹಿಸಿದ್ದಲ್ಲಿ ಕಲಂ 14(1)ರ ಈ ಕೆಳಗಿನ ಪ್ರಾವದಾನಗಳಿಗೆ ಒಳಪಟ್ಟಿ ಸದಸ್ಯತ್ವನ್ನು ಪುನಶ್ಚೇತನಗೊಳಿಸಲು ಅವಕಾಶವಿರುವುದಿಲ್ಲ:-

" ...............

**Provided that in computing the period of ninety days under this sub-section, there shall be excluded any period absence from the building or other construction work due to any personal injury caused to the building workers by accident arising out of and in the couesr of his employment.**

**ಆದರೆ, ಈ ಉಪಕಲಂ ಅಡಿಯಲ್ಲಿ 90 ದಿನಗಳನ್ನು ಲೆಕ್ಕಮಾಡುವಾಗ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯಕ್ಕೆ ಗೈರು ಹಾಜರಿ, ಅವರ ಉದ್ಯೋಗದಲ್ಲಿ ಅಥವಾ ಉದ್ಯೋಗ ಮಾಡುತ್ತಿರುವ ಸಮಯದಲ್ಲಿ ಸಂಭವಿಸಿದ ಅಪಘಾತದ ಕಾರಣದಿಂದ ಉಂಟಾಗಿದ್ದರೆ ಆ ಅವಧಿಯನ್ನು ಹೊರಗಿಡತಕ್ಕದ್ದು".**

ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದ ನಂತರವೇ ಫಲಾನುಭವಿಗಳ ಸದಸ್ಯತ್ವವನ್ನು ಪುನಶ್ಚೇತನಗೊಳಿಸಲು ಮುಂದಿನ ಕ್ರಮ ಕೈಗೊಳ್ಳುವಂತೆ ಈ ಮೂಲಕ ತಿಳಿಸಿದೆ.

02/03/17
ಕಾರ್ಯದರ್ಶಿಗಳು.

ಗೆ,

1. ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ
2. ಎಲ್ಲಾ ಹಿರಿಯ/ಕಾರ್ಮಿಕ ನಿರೀಕ್ಷಕರುಗಳಿಗೆ

ಪ್ರತಿಯನ್ನು:

1. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳ ಮಾಹಿತಿಗಾಗಿ
2. ಕಛೇರಿ ಪ್ರತಿ